I sem (3yrs).

2041/0423/0101

**I Semester 3 Year LL.B./IV Semester 5 Year B.A. LL.B./B.B.A. LL.B./ V Semester 5 Year B.A. LL.B. (Maj.-Min. System)/B.B.A. LL.B. Examination, June/July 2018**

**CONTRACT – I**

**(Old/New Batch)**

Duration : 3 Hours Max. Marks : 100

**Instructions :** 1. Answer Q. No. **9** and **any five** of the remaining questions.

2. Q. No. **9** carries **20** marks and remaining questions carry **16** marks **each**.

3. Answer should be written **either** in English or Kannada **completely**.

Q. No. 1. Define 'contract ' and explain the essentials of a valid contract. Marks : 16

'ಕರಾರನ್ನು' ವ್ಯಾಖ್ಯಾನಿಸಿ ಮತ್ತು ಒಂದು ಊರ್ಜಿತ ಕರಾರಿನ ಪ್ರಮುಖ ಅಂಶಗಳನ್ನು ವಿವರಿಸಿ.

Q. No. 2. Define 'consideration' and explain the essentials of consideration with reference to decided cases. Marks : 16

'ಪ್ರತಿಫಲ'ವನ್ನು ವ್ಯಾಖ್ಯಾನಿಸಿ ಮತ್ತು 'ಪ್ರತಿಫಲ'ದ ಘಟಕಾಂಶಗಳನ್ನು ನಿರ್ಧಾರಿತ ಪ್ರಕರಣಗಳ ಸಹಾಯದೊಂದಿಗೆ ವಿವರಿಸಿ.

Q. No. 3. Explain the provisions relating to legality of object and consideration. Marks : 16

ಉದ್ದೇಶ ಮತ್ತು ಪ್ರತಿಫಲದ ಕಾನೂನು ಬದ್ಧತೆ ಸಂಬಂಧಿಸಿದ ನಿಯಮಗಳನ್ನು ವಿವರಿಸಿರಿ.

Q. No. 4. Explain in brief the various modes of discharge of contracts. Marks : 16

ಕರಾರಿನ ಬಿಡುಗಡೆಯ ವಿವಿಧ ವಿಧಾನಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

Q. No. 5. Explain 'relations resembling to those created by contract (Quasi Contracts)' with reference to provisions of the Indian Contract Act, 1872. Marks : 16

"ಕರಾರಿನಿಂದ ಏರ್ಪಟ್ಟ ಸಂಬಂಧಗಳನ್ನು ಹೋಲುವ ಸಂಬಂಧಗಳು (ಅರೆಕರಾರು)", ಭಾರತೀಯ ಕರಾರು ಅಧಿನಿಯಮ, 1872ರ ಉಪಬಂಧಗಳೊಂದಿಗೆ ವಿವರಿಸಿ.

P.T.O.

Q. No. 6. Explain the law relating to validity of agreements in restraint of trade. Marks : 16

ವ್ಯಾಪಾರ ನಿರ್ಬಂಧಿತ ಒಪ್ಪಂದಗಳ ಊರ್ಜನೆಗೆ ಸಂಬಂಧಿತ ಕಾನೂನನ್ನು ವಿವರಿಸಿ.

Q. No. 7. What is a specific relief ? Explain what contracts can be specifically enforced. Marks : 16

'ನಿರ್ದಿಷ್ಟ ಪರಿಹಾರ' ಎಂದರೇನು ? ಯಾವ ಕರಾರುಗಳನ್ನು ನಿರ್ದಿಷ್ಟವಾಗಿ ಊರ್ಜಿತಗೊಳಿಸಬಹುದು ಎಂಬುದನ್ನು ವಿವರಿಸಿ.

Q. No. 8. Write a short note on **any two** of the following : Marks : 2×8=16

(a) Silence as fraud vitiating the consent of the party

(b) Position of a minor to make a contract

(c) Doctrine of frustration and impossibility of performance.

ಕೆಳಗಿನ ಯಾವುದೇ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) ಮುಕ್ತ ಸಮ್ಮತಿಗೆ ಮಾರಕವಾದ ಮೋಸ ಪೂರಿತ ಮೌನ

(b) ಅಪ್ರಾಪ್ತ ವಯಸ್ಕನ ಕರಾರು ಮಾಡಿಕೊಳ್ಳುವ ಯೋಗ್ಯತೆ

(c) ನಿಷ್ಫಲ ತತ್ವ ಮತ್ತು ನೆರವೇರಿಸುವಿಕೆಯ ಅಸಾಧ್ಯತೆ.

Q. No. 9. Solve **any two** of the following problems : Marks : 2×10=20

ಕೆಳಗಿನ ಯಾವುದೇ **ಎರಡು** ಸಮಸ್ಯೆಗಳನ್ನು ಬಿಡಿಸಿ :

(a) A issues a pamphlet to pay Rs. 5,000/- to anyone who brings to him his missing son. Two friends were sitting in a cafe and reading this pamphlet and discussing about it. The waiter overheard this transaction and understood the offer. The waiter found the missing boy and took him to A. On claim of reward announced, A contends that this offer was not made to the waiter. Decide with reasons.

'ಅ'ನು ತನ್ನ ಕಳೆದು ಹೋದ ಮಗನನ್ನು ಹುಡುಕಿ ತಂದವರಿಗೆ ರೂ. 5,000/-ಗಳ ಪಾರಿತೋಷಕ ನೀಡುವುದಾಗಿ ಕರಪತ್ರ ಮುದ್ರಿಸಿ ಹಂಚುತ್ತಾನೆ. ಇಬ್ಬರು ಸ್ನೇಹಿತರು ಚಹಾ ಅಂಗಡಿಯಲ್ಲಿ ಕುಳಿತು ಈ ವಿಷಯದ ಬಗ್ಗೆ ಚರ್ಚಿಸುತ್ತಿರುತ್ತಾರೆ. ಅದೇ ಸಂದರ್ಭದಲ್ಲಿ ಆ ಚಹಾ ಅಂಗಡಿಯ ಮಾಣಿಯು ಈ ಸಂಭಾಷಣೆಯನ್ನು ಗಮನವಿಟ್ಟು ಆಲಿಸಿ, ವಿಷಯವನ್ನು ತಿಳಿದುಕೊಳ್ಳುತ್ತಾನೆ. ಆ ಮಾಣಿಯು ಕಳೆದು ಹೋದ ಹುಡುಗನನ್ನು ತಂದು 'ಅ'ನಿಗೆ ಒಪ್ಪಿಸುತ್ತಾನೆ. ಪಾರಿತೋಷಕವನ್ನು ಕೋರಿದಾಗ 'ಅ'ನು ಈ ಪ್ರಸ್ತಾವನೆಯು ನಿರ್ದಿಷ್ಟವಾಗಿ ನಿನಗೆ ಮಾಡಿದುದಲ್ಲ ಎಂದು ತಿರಸ್ಕರಿಸುತ್ತಾನೆ. ಕಾರಣಗಳೊಂದಿಗೆ ನಿರ್ಣಯಿಸಿ.

(b) 'X' a minor was lent a loan of Rs. 10,000/- by 'Y'. On 'X' attaining majority, he was further extended with Rs. 5,000/- by 'Y'. Acknowledging the earlier debt also, 'X' now executes a promissory note for a total of Rs. 15,000/-. Decide the validity of the contract with reasons.

'X' ಎಂಬ ಅಪ್ರಾಪ್ತ ವಯಸ್ಕನು 'Y' ನಿಂದ 10,000 ರೂ.ಗಳ ಸಾಲವನ್ನು ಪಡೆದಿರುತ್ತಾನೆ. ಪ್ರಾಪ್ತ ವಯಸ್ಕನಾದ ಮೇಲೆ ಅವನು ಮತ್ತೊಮ್ಮೆ 'Y' ನಿಂದ 5,000 ರೂ.ಗಳ ಸಾಲ ಪಡೆದು, ಪೂರ್ವಭಾವಿಯಾಗಿ ಪಡೆದ 10,000 ರೂ.ಗಳ ಸಾಲವನ್ನು ಒಪ್ಪಿಕೊಳ್ಳುತ್ತಾ, ಒಟ್ಟು 15,000ರೂ. ಗಳಿಗೆ ಸಾಲಪತ್ರವನ್ನು ಬರೆದುಕೊಡುತ್ತಾನೆ. ಈ ಕರಾರಿನ ಸಿಂಧುತ್ವವನ್ನು ಕಾರಣಗಳೊಂದಿಗೆ ನಿರ್ಣಯಿಸಿ.

(c) A goes to a departmental store and picks an article with price tag. When he goes to the counter to pay the price, the shopkeeper declines to sell the article. A wants to sue shopkeeper for breach. Decide.

'ಅ'ನು ಒಂದು ಮಾರಾಟ ಮಳಿಗೆಗೆ ಹೋಗಿ ಬೆಲೆ ನಿಗದಿಪಡಿಸಿದ ಸಂಕೇತವುಳ್ಳ ವಸ್ತುವನ್ನು ಆಯ್ದುಕೊಳ್ಳುತ್ತಾನೆ. ಅವನು ಗಲ್ಲಾ ಪೆಟ್ಟಿಗೆಗೆ ಹೋಗಿ ಬೆಲೆ ನೀಡಿ, ವಸ್ತುವನ್ನು ಪಡೆದುಕೊಳ್ಳುತ್ತಿರುವಾಗ ಮಳಿಗೆಯ ಮಾಲೀಕನು ಆ ವಸ್ತುವನ್ನು ಮಾರಲು ತಿರಸ್ಕರಿಸುತ್ತಾನೆ. 'ಅ'ನು ಮಳಿಗೆಯ ಮಾಲೀಕನ ವಿರುದ್ಧ ಉಲ್ಲಂಘನೆಗಾಗಿ ದಾವೆ ಹೂಡುತ್ತಾನೆ. ನಿರ್ಣಯಿಸಿ.

---